ವಿಚಾರಗಳು ತುಂಬಿ ಗರ್ನಾಲು, ಬಿರುಸು ಬಾಣ ಹೊಡೆದಂತೆನಿಸಿತು. ಧರಧರನೇ ಅಲ್ಲಿಂದ ಎದ್ದು ಹೋಗಿಬಿಟ್ಟಳು. ಮಾಳಪ್ಪ ಶ್ಯಾನುಭೋಗ ಬದುಕಿದ್ದಾನೆಯೇ, ಬರುತ್ತಿದ್ದಾನೆಯೇ ಎಂಬ ನುಡಿಗಳು ಮನಸ್ಸಿನಲ್ಲಿಯೂ ಎದೆಯಲ್ಲಿಯೂ ಗುಡುಗಿದವು.

ಮರುದಿನದೊಳಗೆ ಊರೆಲ್ಲ ಗುಲ್ಲೇಗುಲ್ಲಾಯಿತು. ಊರೆಲ್ಲ ಈ ಸುದ್ದಿ ಹರಡಿತು. ಮಾಳಪ್ಪ ಶ್ಯಾನುಭೋಗರು ಸತ್ತಿಲ್ಲವೆಂದೂ ಸೀತಕ್ಕನ ಮನೆಗೆ ಬರುತ್ತಿದ್ದಾರೆಂದೂ ಅವಳ ಅಳಿಯನಾಗುವುದೂ ಕೂಡ ನಿಶ್ಚಿತವಾಗುವುದಿದೆಯೆಂದೂ ಊರ ಮಂದಿಯೆಲ್ಲ ಹೇಳಿಕೊಂಡರು. ಮಂದಿ ಈ ವಿಚಿತ್ರಕ್ಕೆ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಕೆಲವರು ನಕ್ಕೇ ನಕ್ಕರು. ಸೀತಕ್ಕನ ಮಳ್ಳುತನಕ್ಕೂ ಮಂದಿಯ ನಂಬಿಕೆಗೂ ಒಳ್ಳೆಯ ಅನುಭವವಾಯಿತು. ಸೀತಕ್ಕನಿಗೆ ಮಾತ್ರ ಇದಾವುದೂ ಲಕ್ಷ್ಯಕ್ಕೆ ಬರಲೇ ಇಲ್ಲ. ಹಿಂದಿನದೆಲ್ಲವನ್ನು ಮರೆತುಬಿಟ್ಟಳೇನೋ ಎನ್ನುವಷ್ಟು ಹಿಗ್ಗಿದಳು. ಬಾವಿಯಿಂದ ನೀರು ಎಸೆದು ಅಬ್ಬರಿಗೆ ಗಿಡಕ್ಕೆ ಹಾಕಿಯೇ ಹಾಕಿದಳು. ಅದಕ್ಕೆ ಲೆಕ್ಕವೇ ಇರಲಿಲ್ಲ. ಈಗ ಉಳಿದುದು ಅವಳ ಪಾಲಿಗೆ ಬರೇ ದಿನ ಎಣಿಸುವುದು ಮಾತ್ರ... ನಾಲ್ಕು... ಮೂರು... ಎರಡು... ಒಂದು...!

★★★

ಹಾಗೆ ಅದೇ ಹೊತ್ತಿನ ಸುಮಾರಿಗೆ ರನ್ನರ್ ರಾಯಪ್ಪ ತಿರುಗಿ ಕೆಲಸಕ್ಕೆ ಹಾಜರಾದ. ಅದೇ ಪರಿ ಅದೇ ಬರುವು. ಅವನಲ್ಲಿ ಯಾವ ಬದಲಾವಣೆ ಆದಂತೆಯೂ ಅನಿಸಲಿಲ್ಲ. ಆದರೆ ಅವನು ತಂದ ಈ ಒಂದು ಸುಳ್ಳು ಸುದ್ದಿ ಕತೆಯಾದುದರಿಂದ ಅವನ ಮಾತು ಮಂದಿ ನಂಬುವುದು ಕಡಮೆ ಆಯಿತು. ಎಂತೆಂತಹ ಸುದ್ದಿ ತಂದವನವ! ಎಷ್ಟೆಲ್ಲ ಆತುರ ಇತ್ತು. ಮಂದಿಗೆ ಅವುಗಳಲ್ಲೆಲ್ಲ ಅಂತಹ ಸುದ್ದಿಗೆ ಈಗ ಬೆಲೆ ಇದೆಯೋ ಇಲ್ಲವೋ. ಆದರೆ ರಾಯಪ್ಪ ಮಾತ್ರ ಏನಾದರೂ ಒಂದಲ್ಲ ಒಂದು ಸುದ್ದಿ ತಂದೇ ತರುತ್ತಿದ್ದ. ಬಂದೇ ಬರುತ್ತಿದ್ದ. ಮಂದಿ ಬರುತ್ತಿದ್ದರು. ಕೇಳುತ್ತಿದ್ದರು. ರನ್ನರ ರಾಯಪ್ಪನ ದಾರಿ ಕಾಯುತ್ತಿದ್ದರು. ಎಂದಿನಂತೆ ಅವನ ಕೆಲಸ ನಡೆದೇ ಇತ್ತು. ಹಾಗಿರುವಾಗ ಒಂದು ದಿನ ಟಪಾಲು ಚೀಲಕ್ಕೆ ಸೀಲು ಹಾಕುತ್ತ ರಾಯಪ್ಪ ಕುಳಿತುಕೊಂಡಾಗ ಪೋಸ್ಟ ಮಾಸ್ತರರು–

'ರಾಯಪ್ಪ, ಸೀತಕ್ಕನ ಮನೆಗೆ ದೆವ್ವ ಬಂದದ್ದು ಹೌದೋ, ನಿಜವೇನೋ. ಆ ಸುದ್ದಿ? ನಿನಗೆ ಗೊತ್ತುಂಟೋ?' ಎಂದು ಪ್ರಶ್ನೆ ಹಾಕಿದರು.

'ಇಲ್ಲರೀ ಅದೆಲ್ಲ ಬರೀಭ್ರಮೆ. ಆ ಮುದುಕಿಗೆ.'

ಅದಕ್ಕೆ ಪೋಸ್ಟ್ ಮಾಸ್ತರರು– 'ಹಾಗಾದರೆ ಮಾಳಪ್ಪ ಶ್ಯಾನುಭೋಗರು ಸತ್ತರು ಎಂದು ಹೇಳಿದ್ದೆಯಲ್ಲಾ ನೀನು, ಅದೂ ಭ್ರಮೆ ಏನೋ?' ಎಂದು ಕಣ್ಣು ಮಿಟುಕಿ ಕೇಳಿದರು.

ರಾಯಪ್ಪ ಉತ್ತರ ಕೊಡಲಾರದೇ ಸರಸರನೆ ಚೀಲ ಬೆನ್ನಿಗೆ ಹಾಕಿಕೊಂಡು ಅಲ್ಲಿಂದ ಹೊರಟುಹೋದ.

★★★

ಈಗ ನಮ್ಮೂರಿಗೆ ಮೊದಲಿನಂತೆ ರಾಯಪ್ಪ ಟಪಾಲು ತರುವುದಿಲ್ಲ. ಬಸ್ ಸರ್ವಿಸ್ ಪ್ರಾರಂಭವಾಗಿದ್ದರಿಂದ ನೇರವಾಗಿ ಟಪಾಲು ನಮ್ಮೂರಿನ ಪೋಸ್ಟ್ ಆಫೀಸಿಗೆ ಬಂದು ಬೀಳುತ್ತದೆ. ಅದರಿಂದ ಅನುಕೂಲವಾಗಿದ್ದರೂ ಒಂದು ವಿಷಯದಲ್ಲಿ ಮಾತ್ರ ಕೊರತೆ ಎದ್ದು ಕಾಣುವಂತಿದೆ. ರಾಯಪ್ಪನಿಲ್ಲದ್ದರಿಂದ ಅವನು ತರುವ ಸುದ್ದಿಗಳಿಲ್ಲ; ಸುದ್ದಿಗಳಿಂದ ಮೂಡಿಬರುವ ಕತೆಗಳೂ ಇಲ್ಲ. ಅದರ ಬದಲಾಗಿ ಟೂರಿಸ್ಟ್ ಕಂಪೆನಿಗಳ ಸಿನೇಮಾ ಪೋಸ್ಟರುಗಳು ಅಲ್ಲಲ್ಲಿ ಕಾಣುತ್ತವೆ.